ವೆಚ್ಚದೊಂದಿಗೆ ಲೆಕ್ಕಶೀರ್ಷಿಕೆ 5054 ಯೋಜನೆ ಅಡಿಯಲ್ಲಿ 2009–10ನೇ ಸಾಲಿನ ಅಪೆಂಡಿಕ್ಸ್–ಇ ನಲ್ಲಿ ಸೇರ್ಪಡೆಗೊಳಿಸಲು ಪರಿಶೀಲಿಸಲಾಗುತ್ತಿದ್ದು, ಅನುದಾನದ ಲಭ್ಯತೆಯನ್ನಾಧರಿಸಿ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳ ಲಾಗುವುದು.

1068 Sri Shankara Patila Munenakoppa : Hon'ble Minister for Public Works kindly answer to the below question?

a) Arabavi-Challakeri road construction work having been completed till Naragunda border, what are the reasons for not commencing work from Navalgunda border;

b) Whether there is any plan before the Government to continue this work;

c) If this work is being continued, when the work will commence and when it will be completed?

Sri C.M.UDASI (Minister for public Works) :

a), b) and c) State Highway-45 in Navalgunda taluk having been included in 3 years maintenance package of Karnataka Road Development Corporation, maintenance has been undertaken by KRDCL from 2005 to 2008.

The development works of km 95.95 to 107.95 and km 107.95 to 115.25 of this road at an estimated cost of Rs.130.00 lakhs and Rs.140.00 lakhs respectively are being considered for inclusion in Appendix-E of 2009-10 under the Head of Account 5054-Plan, these works will be taken up based on availability of funds.

979 ಶ್ರೀ ಓಲೆಕಾರ ನೆಹರೂ ಚನ್ನಬಸಪ್ಪ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಹಾಗೂ ಸವಣೂರು ತಾಲ್ಲೂಕುಗಳ ಮಧ್ಯೆ ದೇವಗಿರಿಯಿಂದ ಮೆಳ್ಳಾಗಟ್ಟಿಗೆ ಸೇತುವೆ ನಿರ್ಮಾಣ ಮಾಡುವುದು ಸರ್ಕಾರದ ಪರಿಶೀಲನೆಯಲ್ಲಿದೆಯೇ;

ಆ) ಹಾಗಾದರೆ ಎಂದಿನಿಂದ ಸೇತುವೆ ನಿರ್ಮಿಸುವ ಕೆಲಸ ಪ್ರಾರಂಭಿಸಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹೌದು.

ಆ) ಅನುದಾನದ ಲಭ್ಯತೆ ಮತ್ತು ಅಗತ್ಯತೆ ಮೇರೆಗೆ ಪರಿಗಣಿ ಸಲಾಗುವುದು.

979 Sri Olekara Neharu Channabasappa : Hon'ble Minister for Public Works kindly answer to the below question?

a) Is there any proposal for construction of bridge from Devagiri to Mellaghatti between Haveri and Savanur taluks is under consideration of Government;

b) If so when the construction work starts;

Sri C.M.UDASI (Minister for Public Works) :

a) Yes.

b) The proposal is consider depending availability of funds.

648 ಶ್ರೀ ರೋಷನ್ ಬೇಗ್.ಆರ್. : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಚರಂಡಿ ಮತ್ತು ಮೋರಿಗಳ ಮೇಲೆ ಅನಧಿಕೃತವಾಗಿ ಖಾಸಗಿಯವರು ಕಟ್ಟಡದ ನಿರ್ಮಾಣ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ಅನಧಿಕೃತವಾಗಿ ಕಟ್ಟಿರುವ ಕಟ್ಟಡಗಳ ಸಂಖ್ಯೆಯೆಷ್ಟು;

ಇ) ಹಾಗಿದ್ದಲ್ಲಿ, ಇಂತಹ ಕಟ್ಟಡಗಳನ್ನು ತೆರವುಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಹೌದು.

ಆ) ಇಂತಹ 843 ಕಟ್ಟಡಗಳನ್ನು ಗುರುತಿಸಲಾಗಿದೆ.

ಇ) ಅವುಗಳ ಪೈಕಿ ಈಗಾಗಲೇ 222 ಕಟ್ಟಡಗಳನ್ನು ತೆರವುಗೊಳಿಸಲಾಗಿದೆ ಹಾಗೂ ಉಳಿದವುಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

750 ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿತ್ತೂರು ಕೋಟೆಯಲ್ಲಿ ಕೈಗೊಂಡ ಕಾಮಗಾರಿಗಳು ಕಳಪೆ ಮಟ್ಟದ್ದಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕಳಪೆ ಕಾಮಗಾರಿ ಮಾಡಿದ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ;